ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.

ಫೋನ್ : 080 - 2340 7011 to 25, ಫ್ಯಾಕ್ಸ್ : 91-080-2314 3566 / 2338 9070, ತಂತಿ : ಮೈಸ್ಮಾಲ್ ಕಾರ್ಪ್

ಇ-ಮೈಲ್ : kssidcho@vsnl.com ವೆಬ್‌ಸೈಟ್ : www.kssidc.kar.nic.in

ಸಂಖ್ಯೆ.ಕಸಾ/ಮಾರಾಟ/ತಂತ್ರ/ಸೋಡಿ/20-21/121 ದಿನಾಂಕ : 13-12-2021

## ಕಛೇರಿ ಆದೇಶ

ವಿಷಯ : ಕಬ್ಬಿಣ ಮತ್ತು ಉಕ್ಕು ಸಾಮಗ್ರಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವ ಎಂ.ಎಸ್.ಎಂ.ಇ ಕೈಗಾರಿಕೆಗಳಿಗೆ ಉತ್ಪಾದಕರು ನೀಡುವ ಸೋಡಿ **(Discount)** ಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ :
1. ಕಡತ ಸಂಖ್ಯೆ.ವಾ/ಕಸಾ/ಮಾರಾಟ/ತಂತ್ರ/215.
2. ಕಸಾ/ಮಾರಾಟ/ತಂತ್ರ/ಸೋಡಿ/2020/55 ದಿನಾಂಕ 10.08.2020.
3. ದಿನಾಂಕ.18.11.2021 ರ 363ನೇ ಮಂಡಳಿ ಸಭೆಯ ನಡವಳಿಯಲ್ಲಿ (ಕಾರ್ಯಸೂಚಿ ಸಂಖ್ಯೆ.363/22) ಅನುಮೋದಿಸಿರುವಂತೆ.

-----

ನಿಗಮದ ವಾಣಿಜ್ಯ ವಹಿವಾಟು ವೃದ್ಧಿಸುವ ನಿಟ್ಟಿನಲ್ಲಿ ಮಾರಾಟ ತಂತ್ರಗಾರಿಕೆ ಅಡಿಯಲ್ಲಿ ದಿನಾಂಕ. 18-11-2021 ರಂದು ಜರುಗಿದ 363ನೇ ಮಂಡಳಿ ಸಭೆಯಲ್ಲಿ ನಿಗಮದಿಂದ ಮಾಸಿಕ 60 ಮೆ.ಟನ್ನುಗಳಿಗೂ ಮೇಲ್ಪಟ್ಟು ನೇರವಾಗಿ ಉತ್ಪಾದಕರ ಡಿಪೋಗಳಿಂದ ಕಚ್ಚಾ ಸಾಮಗ್ರಿಗಳನ್ನು ಎತ್ತುವಳಿ ಮಾಡಿದಲ್ಲಿ ಅಂತಹ ಗ್ರಾಹಕರುಗಳಿಗೆ ಉತ್ಪಾದಕರು ನೀಡುವ ಮಾಸಿಕ ಸೋಡಿಯನ್ನು ಯಥಾವತ್ತಾಗಿ ವಿಸ್ತರಿಸುವ ಪ್ರಸ್ತಾವನೆಯನ್ನು ಮಂಡಳಿಯು ಅನುಮೋದಿಸಿರುತ್ತದೆ.

ಹಾಗಾಗಿ, ನಿಗಮದಿಂದ ಪ್ರತಿ ತಿಂಗಳು 60 ಮೆ.ಟನ್ನು ಮತ್ತು ಅದಕ್ಕೂ ಮೇಲ್ಪಟ್ಟು ಕಚ್ಚಾ ಸಾಮಗ್ರಿಯನ್ನು ಖರೀದಿಸುವ ಗ್ರಾಹಕರುಗಳಿಗೆ ಮೂಲ ಉತ್ಪಾದಕರು (ಮೆ: **SAIL** ಮತ್ತು ಮೆ: **RINL**) ನಿಗಮಕ್ಕೆ ನೀಡುವ ಮಾಸಿಕ ಸೋಡಿ ನೀಡುವ ಸೌಲಭ್ಯವನ್ನು 2021-22 ನೇ ಸಾಲಿಗೂ 1 ವರ್ಷದ ಅವಧಿಗೆ ವಿಸ್ತರಿಸಲಾಗಿದೆ. ಈ ಆದೇಶವು ದಿನಾಂಕ 01-06-2021 ರಿಂದ 31-05-2022 ರವರೆಗೆ ಜಾರಿಯಲ್ಲಿರುತ್ತದೆ.

ಅದರಂತೆ, ಒಂದು ತಿಂಗಳಿನಲ್ಲಿ ಎತ್ತುವ ಪರಿಮಾಣಕ್ಕನುಗುಣವಾಗಿ ಸೋಡಿ **(Discount)** ಯನ್ನು ನೋಂದಾಯಿತ ಎಂಎಸ್.ಎಂ.ಇ. ಕೈಗಾರಿಕೆಗಳನ್ನು ಸೆಳೆಯುವ ಹಾಗೂ ಕಬ್ಬಿಣ ಮತ್ತು ಉಕ್ಕು ಸಾಮಗ್ರಿ ವಹಿವಾಟು ಹೆಚ್ಚಿಸುವ ಸಲುವಾಗಿ ನಗದು ಮತ್ತು ಬ್ಯಾಂಕ್ ಗ್ಯಾರಂಟಿ ಹಾಗೂ ಕೆ.ಎಸ್.ಎಫ್.ಸಿ. ಸಂಗಡ ಮಾಡುವ ಒಡಂಬಡಿಕೆಯಂತೆ ಖರೀದಿಸುವ ಎಂ.ಎಸ್.ಎಂ.ಇ. ಕೈಗಾರಿಕೆಗಳಿಗೆ ಈ ಕೆಳಕಂಡಂತೆ ಸೋಡಿಗಳನ್ನು ನೀಡುವಂತೆ ಆದೇಶಿಸಲಾಗಿದೆ.

ಅ) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ತಿಂಗಳಿಗೆ 60 (ಅರವತ್ತು) ಮೆ.ಟನ್ನು ಮೆ: **SAIL** ಮೆ: **RINL** ರವರು ಉತ್ಪಾದಿಸುವ ಕಬ್ಬಿಣ ಮತ್ತು ಉಕ್ಕು ಕಚ್ಚಾ ಸಾಮಗ್ರಿಗಳನ್ನು ನಿಗಮದಿಂದ ಅಥವಾ ನೇರವಾಗಿ ಮೆ: **SAIL** ಮೆ: **RINL** ಉಗ್ರಾಣ / ರೈಲ್ವೆ ಸೈಡಿಂಗ್‌ನಿಂದ ಎತ್ತುವಳಿ ಮಾಡಿದ್ದಲ್ಲಿ ಸದರಿ ಪರಿಮಾಣಕ್ಕೆ ಉತ್ಪಾದಕರು ನಿಗಮಕ್ಕೆ ನೀಡುವ ಮಾಸಿಕ ಸೋಡಿಯನ್ನು ಯಥಾವತ್ತಾಗಿ ಗ್ರಾಹಕರುಗಳಿಗೆ ವಿಸ್ತರಿಸುವುದು.

ಪು.ತಿ.ನೋ.



Sidram/Letters-1

ಆ) ಉತ್ಪಾದಕರು ನೀಡುವ ಸೋಡಿ ವಿಸ್ತರಿಸುವ ಪ್ರಯೋಜನವನ್ನು ಬೆಂಗಳೂರಿನಿಂದ ಹೊರಗಿರುವ ಎಂ.ಎಸ್.ಎಂ.ಇ ಕೈಗಾರಿಕೆಗಳಿಗೂ ಸಹ ಮೇಲಿನಂತೆ ವಿಸ್ತರಿಸತಕ್ಕದ್ದು.

ಇ) ಮೇಲಿನಂತೆ ಸೋಡಿಯನ್ನು ವಿಸ್ತರಿಸಲು ಅನುವಾಗುವಂತೆ ಸಾಮಗ್ರಿಗಳನ್ನು ಖರೀದಿಸುವ ಎಂ.ಎಸ್.ಎಂ.ಇ ಕೈಗಾರಿಕೆಗಳ ಹೆಸರು, ವಿಳಾಸ, ಸಂಕೇತ ಸಂಖ್ಯೆ. **(Code No.)** ಇನ್ವಾಯ್ಸ್ ಸಂಖ್ಯೆ. ದಿನಾಂಕ, ಪರಿಮಾಣ ಸೇರಿದಂತೆ ಸರಕಿನ ವಿವರ ಹಾಗೂ ಮೊತ್ತವನ್ನು ಸೇರಿಸಿ ಪಟ್ಟಿ ತಯಾರಿಸಿ ಮೇಲಾಧಿಕಾರಿಗಳ ಮೂಲಕ ದೃಢೀಕರಿಸಿ ಕ್ರೆಡಿಟ್ ನೋಟ್ ವಿತರಿಸಲು ಕೇಂದ್ರ ಕಛೇರಿ ವಾಣಿಜ್ಯ ವಿಭಾಗಕ್ಕೆ ಪ್ರತಿ ತಿಂಗಳು 10ನೇ ತಾರೀಖಿನೊಳಗೆ ತಪ್ಪದೆ ಕಳುಹಿಸತಕ್ಕದ್ದು.

ಈ) ಮೇಲಿನಂತೆ ನೀಡಲಾಗುವ ಸೋಡಿಯನ್ನು ಉತ್ಪಾದಕರಿಂದ ಸ್ವೀಕರಿಸಿದ ನಂತರವೇ ಎಂ.ಎಸ್.ಎಂ.ಇ ಕೈಗಾರಿಕೆಗಳಿಗೆ ಕ್ರೆಡಿಟ್ ನೋಟ್ ಮೂಲಕ ನೀಡುವುದು.

ವಿಭಾಗ ಮತ್ತು ವಲಯಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮೇಲೆ ವಿಸ್ತರಿಸಿರುವ ಸೌಲಭ್ಯಗಳನ್ನು ಬಳಸಿಕೊಂಡು ಅವರ ವ್ಯಾಪ್ತಿಯಲ್ಲಿ ಬರುವ ಕೈಗಾರಿಕೆಗಳಿಗೆ ಭೇಟಿ ನೀಡಿ ಮೇಲಿನ ಸೌಲಭ್ಯಗಳನ್ನು ಅವರಿಗೆ ವಿವರಿಸುವ ಮೂಲಕ ವಹಿವಾಟನ್ನು ಹೆಚ್ಚಿಸಲು ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

(ಸಿ.ಸತ್ಯಭಾಮ)
ವ್ಯವಸ್ಥಾಪಕ ನಿರ್ದೇಶಕರು.

17/11/21

ಗೆ,

1. ಉಪ ಪ್ರಧಾನ ವ್ಯವಸ್ಥಾಪಕರು (ಕೈವ), ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ.
2. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಚನ್ನಸಂದ್ರ ಉಗ್ರಾಣ,
3. ಸಹಾಯಕ ಪ್ರಧಾನ ವ್ಯವಸ್ಥಾಪಕರು / ವ್ಯವಸ್ಥಾಪಕರು (ಕೈವ) ಬೆಂ.ವಿಭಾಗ / ಪೀಣ್ಯ / / ತುಮಕೂರು / ದಾವಣಗೆರೆ / ಹುಬ್ಬಳ್ಳಿ / ಬೆಳಗಾವಿ / ಗುಲಬರ್ಗಾ / ಮೈಸೂರು / ಶಿವಮೊಗ್ಗ.
4. ಕಾರ್ಯ ನಿರ್ವಾಹಕ ಅಭಿಯಂತರರು, ಬೆಂಗಳೂರು / ಮೈಸೂರು / ಹುಬ್ಬಳ್ಳಿ ಮತ್ತು ಗುಲಬರ್ಗಾ.
5. ಸಂಬಂಧಪಟ್ಟ ಎಲ್ಲಾ ಶಾಖಾ / ಮಾರಾಟ ವ್ಯವಸ್ಥಾಪಕರುಗಳಿಗೆ.

ಪ್ರತಿ :

6. ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು.
7. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ) / (ಕೈವ), ಕರಾಸಕೈಅನಿನಿ, ಬೆಂಗಳೂರು.
8. ಉಪ ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ) / (ಆಲೆಪ) / (ಹಣಕಾಸು), ಕರಾಸಕೈಅನಿನಿ, ಬೆಂಗಳೂರು.
9. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು. ಇವರಿಗೆ ವೆಬ್‌ಸೈಟ್‌ನಲ್ಲಿ ಅಳವಡಿಸುವ ಸಲುವಾಗಿ.